
ಸಾಮಾಜಿಕ ಜಾಲತಾಣದಲ್ಲಿನ ನಮ್ಮ ವರ್ತನೆ ನಮ್ಮ ವ್ಯಕ್ತಿತ್ವದ ಚಿತ್ರಣವೂ ಹೌದು. ಕೆಲವೊಮ್ಮೆ, ಬಂಧುಮಿತ್ರರೊಂದಿಗಿನ ನೇರ ಒಡನಾಟದಲ್ಲಿ ಸಭ್ಯವಾಗಿರುವ ನಮ್ಮ ನಡವಳಿಕೆ, ಸಾಮಾಜಿಕ ಜಾಲತಾಣಗಳಲ್ಲಿನ ಚಟುವಟಿಕೆಗಳಲ್ಲಿ ಸಭ್ಯತೆಯ ಗೆರೆ ಮೀರಿಬಿಟ್ಟಿರುತ್ತದೆ. ಅದು ನಮ್ಮ ವ್ಯಕ್ತಿತ್ವಕ್ಕೆ ನಾವೇ ಮಸಿ ಬಳಿದುಕೊಳ್ಳುವ ಕ್ರಮ.



ಕ್ರಿಯೆ ಅಥವಾ ಪ್ರತಿಕ್ರಿಯೆಗಳ ಪೈಕಿ ಒಂದು ಕಡೆಯವರು ವೇತನ ಸಹಿತ ವೃತ್ತಿ ನಿರ್ವಹಿಸುತ್ತಿರುತ್ತಾರೆ. ಮತ್ತೊಂದು ಕಡೆಯವರು ಅದನ್ನು ಖಂಡಿಸುವುದರಲ್ಲಿ ತಲ್ಲೀನರಾಗಿ ತಮ್ಮ ಸಮಯ ಹಾಳು ಮಾಡಿಕೊಳ್ಳುತ್ತಿರುತ್ತಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಕ್ಯಾಂಪೇನ್‌ಗಳನ್ನು ನಡೆಸುವುದು ಒಂದು ವೃತ್ತಿಯೂ ಹೌದು. ಕ್ಯಾಂಪೇನ್ ಅಥವಾ ಅಭಿಯಾನ ಎನ್ನುವುದು ಒಂದು ಸರಳರೇಖೆಯಂತೆ ಇರುವುದಿಲ್ಲ. ಒಂದು ವಿಚಾರದ ಕುರಿತು ಜಾಗೃತಿ ಮೂಡಿಸುವುದಷ್ಟೇ ಅಭಿಯಾನ ಅಲ್ಲ. ಒಂದು ವಿಚಾರದ ಅಥವಾ ಸಿದ್ಧಾಂತದ ವಿರುದ್ಧ ಅಲೆ ಏಳುವಂತೆ, ಜನರನ್ನು ಪ್ರಚೋದಿಸುವುದು ಕೂಡ ಅಭಿಯಾನವೇ ಹೌದು. ಹಾಗಿದ್ದರೆ ಕಂಡದ್ದಕ್ಕೆಲ್ಲ ಪ್ರತಿಕ್ರಿಯಿಸುತ್ತ ನೆಮ್ಮದಿ ಹಾಳು ಮಾಡಿಕೊಳ್ಳುತ್ತ, ಸ್ನೇಹಿತರನ್ನು ಕಳೆದುಕೊಳ್ಳುವುದರಲ್ಲಿ ಅರ್ಥವೇನಿದೆ.

ಗೋಡೆ ಕಲುಷಿತವಾಗಲು ಸಿದ್ಧಾಂತಗಳ ಕುರಿತು ಕೆಸರು ಎರಚಾಡಿಕೊಳ್ಳುವುದಷ್ಟೇ ಕಾರಣವಲ್ಲ. ಒಮ್ಮೆ ಸುಧಾರಾಣಿ ಎನ್ನುವವರು ತಮ್ಮ ಫೇಸ್‌ಬುಕ್ ಪುಟ ಹಾಗೂ ಇನ್‌ಸ್ಟಾಗ್ರಾಂ ಪುಟದಲ್ಲಿ 'ರಂಗೀನ್ ಸಿಲ್ಕ್' ಎಂಬ ಸೀರೆಯ ಲಿಂಕ್‌ನ್ನು ಅಪ್‌ಲೋಡ್ ಮಾಡಿ ಸೀರೆಗಳ ಬಣ್ಣ ವಿನ್ಯಾಸಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಆ ಪೋಸ್ಟ್‌ಗೆ ಸಾವಿರಾರು ಲೈಕ್‌ಗಳು ಬಂದಿದ್ದವು. ಮತ್ತೆ ಕೆಲವರು, 'ಈಗಲೇ ಆರ್ಡರ್ ಕೊಟ್ಟೆ ಕಣೇ' ಎಂದು ಕಮೆಂಟ್ ಬಾಕ್ಸ್‌ನಲ್ಲಿ ಟೈಪಿಸಿದರು. ಸೀರೆಗಳ ಬಣ್ಣ ಮತ್ತು ವಿನ್ಯಾಸ ಆಕರ್ಷಕವಾಗಿದ್ದವು. ಆದರೆ ಕೆಲವೇ ದಿನಗಳಲ್ಲಿ ಅದೇ ಲಿಂಕ್ ಮತ್ತೆ ಟೈಮ್‌ಲೈನ್ ಮೇಲೆ ರಾರಾಜಿಸಿತು. ಕಮೆಂಟ್ ಬಾಕ್ಸ್‌ನಲ್ಲಿ ಯದ್ವಾತದ್ವಾ ಬೈಗುಳ ಭರಾಟೆ ಸಾಗಿತ್ತು. 1,200 ರೂಪಾಯಿ ಕೊಟ್ಟು ತರಿಸಿದ ಸೀರೆ, ನೂರು ರೂಪಾಯಿ ಸೀರೆಯಂತೆ ಕಳಪೆ ಗುಣಮಟ್ಟದ್ದಾಗಿತ್ತು. ವಾಪಸ್ ಮಾಡುವ ನಿಯಮಗಳನ್ನೆಲ್ಲ ಓದಿಕೊಂಡಿದ್ದರೂ, ಮೇಲ್‌ಗಾಗಲೀ, ಫೋನ್‌ಗಾಗಲೀ ಪ್ರತಿಕ್ರಿಯೆ ಶೂನ್ಯವೇ. ರಂಗೀನ್ ಸಿಲ್ಕ್ ಸೀರೆ ಮಾರುವವರ ಮೇಲಿನ ಸಿಟ್ಟೆಲ್ಲ ಅದನ್ನು ಶಿಫಾರಸು ಮಾಡುವ ಗೆಳತಿಯ ಮೇಲೆ ತಿರುಗಿತ್ತು. ಹೀಗೆ ಒಂದು ಸೋಲಿನ ಕುರಿತ ಸಿಟ್ಟು ಮಿತಿಮೀರಿದಾಗ ಚಾರಿತ್ರ್ಯ ವಧೆ ಮಾಡುವ ಕ್ರೌರ್ಯವೂ ಅಲ್ಲಿ ಕಾಣುತ್ತದೆ.

ತೀವ್ರವಾದ, ಕಟುವಾದ ಮಾತುಗಳನ್ನು ವಿಮರ್ಶೆಯ ರೂಪದಲ್ಲಿ ಯಾಕೆ ಜನರು ಪ್ರಯೋಗಿಸುತ್ತಾರೆ. ಮನಃಶಾಸ್ತ್ರಜ್ಞರ ಪ್ರಕಾರ, ಒಬ್ಬ ವ್ಯಕ್ತಿಯ ಅಂತರಂಗದಲ್ಲಿರುವ ಸಿಟ್ಟನ್ನು ವ್ಯಕ್ತಪಡಿಸಲು ಒಂದಲ್ಲ ಒಂದು ಮಾರ್ಗದ ಅವಶ್ಯಕತೆ ಇರುತ್ತದೆ. ಸಿನಿಮಾಗಳಲ್ಲಿ ಹೀರೊಗಳು, ತುಂಬಾ ಸಿಟ್ಟು ಬಂದಾಗ, ಬಿಯರ್ ಗ್ಲಾಸನ್ನೇ ಅಮುಕಿ ಪುಡಿಮಾಡುತ್ತಾರೆ. ಅಥವಾ ಗೋಡೆಗೆ ಡಬ್ ಅಂತ ಗುದ್ದಿ ಅಂಗೈಯಲ್ಲಿ ರಕ್ತ ಚಿಮ್ಮುವಂತೆ ಮಾಡುತ್ತಾರೆ. ಕೈಯಲ್ಲಿರುವ ವಸ್ತುವನ್ನೇ ಡಮಾರ್ ಅಂತ ಕೆಳಕ್ಕೆ ಎಸೆಯುತ್ತಾರಲ್ಲ. ಕಟುವಾದ ಪದಗಳನ್ನು ಬಳಸಿ, ಟೀಕಿಸುವುದು ಮತ್ತು ಅದನ್ನು ವಿಮರ್ಶೆ ಎಂದು ಹೆಸರಿಸುವುದು ಕೂಡ ಇದೇ ಮಾದರಿಯ ಅಭಿವ್ಯಕ್ತಿ. ವ್ಯಂಗ್ಯ, ಭರ್ತ್ಸನೆಯ ಮಾತುಗಳನ್ನು ಬಳಸಿ ಟೀಕಿಸಿದ ತಕ್ಷಣ, ಮನಸ್ಸಿಗೆ ಕ್ಷಣಿಕವಾದ ತೃಪ್ತಿ ಸಿಗುತ್ತದೆ. ಅಲ್ಲಿಗೆ ಸಿಟ್ಟಿನ ಭರಾಟೆ ಕೊಂಚ ಕಡಿಮೆಯಾಗುತ್ತದೆ. ಅಂತಹ ಪ್ರತಿಕ್ರಿಯೆಗಳು ವಾಸ್ತವಿಕ ಪ್ರತಿಭಟನೆಯ ಕಾವನ್ನು ತುಸು ಕಡಿಮೆ ಮಾಡುತ್ತವೆ.

ಒಂದಂತೂ ನಿಜ. ಸಾಮಾಜಿಕ ಜಾಲತಾಣದಲ್ಲಿನ ನಮ್ಮ ವರ್ತನೆ ನಮ್ಮ ವ್ಯಕ್ತಿತ್ವದ ಚಿತ್ರಣವೂ ಹೌದು. ಕೆಲವೊಮ್ಮೆ, ಬಂಧುಮಿತ್ರರೊಂದಿಗಿನ ನೇರ ಒಡನಾಟದಲ್ಲಿ ಸಭ್ಯವಾಗಿರುವ ನಮ್ಮ ನಡವಳಿಕೆ, ಸಾಮಾಜಿಕ ಜಾಲತಾಣಗಳಲ್ಲಿನ ಚಟುವಟಿಕೆಗಳಲ್ಲಿ ಸಭ್ಯತೆಯ ಗೆರೆ ಮೀರಿಬಿಟ್ಟಿರುತ್ತದೆ. ಅದು ನಮ್ಮ ವ್ಯಕ್ತಿತ್ವಕ್ಕೆ ನಾವೇ ಮಸಿ ಬಳಿದುಕೊಳ್ಳುವ ಕ್ರಮ. ಸಾಮಾಜಿಕ ಜಾಲತಾಣ ಎನ್ನುವುದು ಅಪಾರ ಸಾಧ್ಯತೆಗಳಿರುವ ಅದ್ಭುತ ವೇದಿಕೆ. ಅದನ್ನು ಸಮರ್ಪಕವಾಗಿ ಬಳಸಿಕೊಂಡರೆ ವ್ಯಕ್ತಿತ್ವ ಸುಂದರವಾಗುತ್ತದೆ, ತಿಳಿವಳಿಕೆಯೂ ಹೆಚ್ಚುತ್ತದೆ. ಇಲ್ಲದೆ ಹೋದರೆ, ವೃಥಾ ಕಾಲಕ್ಷೇಪದ, ಚಾರಿತ್ರ್ಯಹರಣದ ವೇದಿಕೆ ಅದಾಗುತ್ತದೆ.

ಕೊನೆಯದಾಗಿ ಮತ್ತದೇ ಪ್ರಶ್ನೆ – ನಿಮ್ಮ ಗೋಡೆ ಸ್ವಚ್ಛವಾಗಿದೆಯೇ? ಇದು ಸ್ವವಿಮರ್ಶೆಯ ಸಮಯ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in